MANCHANABELE IRRIGATION-FLOOD CONTROL PROJECT IN RAMANAGARAM TALUK

365. SRI B. PUTTASWAMAIAH (Ramanagaram).—

Will the Minister of State for Major Irrigation be pased toel state :—

(*a*) whether it is a fact that Manchanabele irrigation-*cum*-flood control project which was started in 1968-69 in Ramanagaram taluk has been stopped;

(*b*) whether Government are aware that road and buildings costing Rs. 40 lakhs have been completed and there is no progress in the construction of the project;

(*c*) the expenditure incurred on the project establishment (Yearwise) and the amount allotted to the project?

SRI H. N. NANJE GOWDA (Minister of State for Major Irrigation).—

(*a*) No.

(*b*) Approach roads to dam site and a few buildings for the staff, being the essential preliminary works, are taken up and nearing compietion. The outlay on these works is about Rs. 17 lakhs.

Priliminary works pertaining to the dam like foundation clearing on the flanks, R. C. C. cut off etc. costing about Rs. 15.26 lakhs have also been exeecuted.

(*c*) *Year*	*Grant*	*Expenditure on establishment*
	Rs.	Rs.
1969-70	1.5 Lakhs	23,994
1970-71	12.00 ,,	2,73,078
1971-72	22.84 ,,	2, 1;000
1972-73	13.00 ,,	2,64,581
1973-74	7.00 ,,	85,029 (upto July 1973)

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಂಚನಬೆಲೆ ಪ್ರಾಜೆಕ್ಟಿನ ಉದ್ದೇಶ ನಿರಾವರಿ ಯೋಜನೆಗಿಂತ ಪ್ರವಾಹ ನಿಯಂತ್ರಣವನ್ನು ತಡೆಗಟ್ಟುವುದೇ ಆದರ ಮೂಲ ಉದ್ದೇಶವಲ್ಲವೇ ?

†ಶ್ರೀ ಹೆಚ್. ಎನ್. ನಂಜೇಗೌಡ.—ಹೌದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಆದರ ಒಟ್ಟು ಅಂದಾಜು ವೆಚ್ಚ ವೆಷ್ಟು ?

ಶ್ರೀ ಹೆಚ್. ಎನ್. ನಂಜೇಗೌಡ, ಮಂಚನಬೆಲೆ ಯೋಜನೆ ಅಂದಾಜು ಆದದ್ದು ೨,೩೭,೩೬,೦೦೦ ರೂಪಾಯಿ. ಆ ಬಗ್ಗೆ ಪುನರಂಚಾಜು ಆದದ್ದು ೫೬೫ ಲಕ್ಷ ರೂಪಾಯಿ ವಂತಪ್ತಿ ಇವನ್ನು ಟೆಕ್ನಿಕಲ್ ಸಮಿತಿಯವರು ಪರಿಶೀಲನೆ ಮಾಡುತ್ತಿದ್ದಾರೆ. ಇದು ಒಮ್ಮೆ ಹೋಗಿ ಬಂದಿದೆ. ಇದಕ್ಕೆ ಜಿಯಾಲಿಜಿಸ್ಟ್‌ನ್ನು ಕರೆಸಿದ್ದಾತೆ. ಪುನಃ ಅವರು ಅಲ್ಲಿಗೆ ಹೋಗಿ ಬಂಪಮೇಲೆ ಇದನ್ನು ಅಂತಿಮವಾಗಿ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಈಗ ಈ ಕೆಲಸ ನಡೆಯುತ್ತಿರುವ್ದ ವೇಗವನ್ನು ನೋಡಿದರೆ ಆ ಪ್ರದೇಶದ ರೈತರ ತೋಟ ತುಗಡಿಗಳು ಪ್ರತಿವರ್ಷ ನೀರಿನಲ್ಲಿ ಕೊಚ್ಚಿಕೊಂಡು ಬರುತ್ತಿರುವುದು ತಪ್ಪಲಿಲ್ಲ. ಹೀಗಾದರೆ ಬಡ ರೈತರಿಗೆ ಹಾನಿಯಾಗುವುದಿಲ್ಲವೇ ? ಮತ್ತು ಇದು ಇನ್ನೂ ನೂರು ವರ್ಷವಾದರೂ ಕೂಡ ಮುಗಿಯದ ರೀತಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತಾ ಇದೆ ಎಂದು ಹೇಳಿದರೆ ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಹೆಚ್. ಎನ್. ನಂಜೇಗೌಡ —ದುಡ್ಡು ಇಲ್ಲ ಎಂದು ಅಲ್ಲಿ ಕೆಲಸ ನಿಧಾನವಾಗಿಲ್ಲ. ಭೌಗೋಳಿಕ ತೊಂದರೆಯಿಂದ ಸ್ವಲ್ಪ ನಿಧಾನವಾಗಿದೆ. ಇನ್ನೂ ಖಚಿತವಾದ ಎಸ್ಟಿಮೇಟನ್ನು ಮಾಡಿಲ್ಲಾ. ಸದ್ಯದಲ್ಲೇ ಅದನ್ನೂ ತೀರ್ಮಾನ ಮಾಡುತ್ತೇವೆ. ಹಾಗೂ ಇದನ್ನು ೫ ವರ್ಷದ ಅವಧಿಯಲ್ಲಿ ಈ ಕೆಲಸವನ್ನು ಮುಗಿಸಬೇಕು ಎನ್ನುವುದು ಸರ್ಕಾರದ ಅಭಿಪ್ರಾಯ.

ಶ್ರೀ ಕೆ. ಹೆಚ್. ಹನುಮೇಗೌಡ.—ಫಿನೇ ಇಸವಿಯಲ್ಲಿ ಇದಕ್ಕೆ ೧ ಲಕ್ಷ ೫೦ ಸಾವಿರ ರೂಪಾಯಿಯನ್ನು ಗ್ರ್ಯಾಂಟನ್ನು ಕೊಟ್ಟಿದ್ದೀರಿ, ೧೯೭೩-೭೪ರಲ್ಲಿ ೭ ಲಕ್ಷ ರೂಪಾಯಿ ಗ್ರ್ಯಾಂಟನ್ನು ಕೊಟ್ಟಿದ್ದೀರಿ, ಈ ರೀತಿಯಾಗಿ ೫ ವರ್ಷವೂ ಕೂಡ ಗ್ರ್ಯಾಂಟ್ ಕೊಟ್ಟಿದ್ದೀರಿ. ಆದುದರಿಂದ ಈ ಗ್ರ್ಯಾಂಟಿನಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—ಇದುವರೆಗೆ ಒಟ್ಟು ೫೫ ಲಕ್ಷ ರೂಪಾಯಿ ಗ್ರ್ಯಾಂಟ್ ಒದಗಿಸಲಾಗಿದೆ. ಅದರಲ್ಲಿ ೩೩ ಲಕ್ಷ ರೂಪಾಯಿ ಇಲ್ಲಿಯವರೆಗೆ ಖರ್ಚಾಗಿದೆ.

ಶ್ರೀ ಎ. ಎಸ್. ಕೃಷ್ಣನ್.—ಮಂಚನಬೆಲೆ ಯೋಜನೆ ಬಗ್ಗೆ ಹಿಂದೆಯೂ ಕೂಡ ಚರ್ಚೆ ನಡೆದಿತ್ತು. ಒಂದು ಕಾಲಕ್ಕೆ ಇದನ್ನು ತಾಂತ್ರಿಕವಾಗಿ ಕೈಬಿಡಬೇಕು ಎಂಬ ಅಭಿಪ್ರಾಯ ಇತ್ತು. ಮತ್ತೆ ಇದರ ಚರ್ಚೆ ನಡೆಯಿತು. ಹಿಂದೆ ಶ್ರೀಮಾನ್ ಹನುಮಂತಯ್ಯನವರು ಇದ್ದಾಗಲೇ ಈ ಬಗ್ಗೆ ಚರ್ಚೆಯಾಗಿ ಇದನ್ನು ತೆಗೆದುಕೊಂಡೇ ತೀರಬೇಕು ಎಂದು ಹೇಳಿದ್ದರು. ಆದರೆ ತಾಂತ್ರಿಕವಾಗಿ ಸರಿ ಇರಲಿಲ್ಲ. ಆದುದರಿಂದ ಇದು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಹೇಳುತ್ತೇನೆ. ಇದಕ್ಕೆ ಕಾರಣ ಏನು ?

ಶ್ರೀ ಡಿ. ದೇವರಾಜ್ ಅರಸ್.—ಒಂದು ಸಾರಿ ಎಷ್ಟಿಮೇಟ್ ಆಗಿ ಕೆಲಸ ಪ್ರಾರಂಭ ಮಾಡಿದಶು. ಅಲ್ಲಿ ಅಡಿಪಾಯವನ್ನು ಕೆಲವು ಆಳ ತೆಗೆದರು. ಕೆಲವು ಆಳದವರೆಗೆ ಅಡಿಪಾಯ ಹೋದಾಗ ಅಲ್ಲಿ ದೊಂಗಲಂ ಬಿತ್ತು ಎಂದು ಹೇಳಿದರು. ಆಗ ನಾನು ಅದಕ್ಕೆ ಸಂಭಂದಪಟ್ಟ ಫೈಲ್ ತರಿಸಿ ನೋಡಿದೆ. The whole thing has to be reinvestigated and estimates prepared. That work is now going on and perhaps shortly it will come before the Government and afterwards we will start the work.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು —ಮಂಚನಬೆಲೆ ಯೋಜನೆಯನ್ನು ತಾಂತ್ರಿಕವಾಗಿ ಪರಿಶೀಲಿಸಿದಾಗ ಅಲ್ಲಿ ಫಾಲ್ಸ್ ಸಿಕ್ಕಿತು ಎಂಬುದನ್ನು ಮನಗೊಂಡಿರುವಾಗ ಮಾಗಡಿ ತಾಲ್ಲೂಕಿನೊಳಗೆ ಆ ಡ್ಯಾಮನ್ನು ೨ ಮೈಲಿ ಹಿಂದೆ ಹಾಕಿದರೆ ಆ ಎರಡು ತಾಲ್ಲೂಕಿಗೂ ಸಹಾಯವಾಗುತ್ತದೆ ಎಂದು ಜನರಿಂದ ಕೋರಿಕೆ ಬಂದರೆ ಅದನ್ನು ಆ ರೀತಿ ಬದಲಾವಣೆ ಮಾಡುತ್ತೀರಾ? ಈಗ ಅದನ್ನು ಹಾಗೆಯೇ ಇಡುವುದಕ್ಕೆ ಕಾರಣ ಏನು ? ಇದನ್ನು ಪುನರ್‌ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—ಕೆಲಸ ಪ್ರಾರಂಭವಾಗಿದೆ. ಈಗ ೫೩ ಲಕ್ಷ ವೆಚ್ಚವಾಗಿದ್ದೆ, ಅದನ್ನು ಪುನರ್‌ಪರಿಶೀಲನೆ ಮಾಡುವುದೇನೂ ಇಲ್ಲ. ಅಲ್ಲಿ ಕೆಲಸ ತೆಗೆದುಕೊಂಡು ಮುಗಿಸಬೇಕು.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಂಚನಬೆಲೆ ಹಾಗೂ ಪ್ರವಾಹ ನಿಯಂತ್ರಣಾ ಯೋಜನೆಯಲ್ಲಿ ಅವರೆಹಳ್ಳಿ ಗ್ರಾಮ ಪೂರಾ ಮುಳುಗಡೆಯಾಗುತ್ತದೆ. ಅಲ್ಲಿ ೨೧೦ ಜನ ಹರಿಜನ ಸಂಸಾರ ಇದೆ. ಅವರನ್ನು ರೀಹ್ಯಾಬಿಲಿಟೇಟ್ ಮಾಡಲು ಅಗ್ರಿಕಲ್‌ಚರಲ್ ಕಾಲೋನಿ ವ್ಯವಸ್ಥೆ ಮಾಡಿ, ಪೂರ್ವಭಾವಿಯಾಗಿಯೇ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಅವರು ಮನವಿ ಮಾಡಿಕೊಂಡಿದ್ದರು. ಇದು ಏನಾಯಿತು ?

ಶ್ರೀ ಹೆಚ್. ಎನ್. ನಂಜೇಗೌಡ —ಆ ಆಲೋಚನೆ ಸರ್ಕಾರದ ನೀತಿಯಲ್ಲೂ ಇದೆ. ಅವರಿಗೆ ಪುನರ್ವಸತಿ ಕಲ್ಪಿಸಿಕೊಡುವುದು ಪ್ರಾಜೆಕ್ಟ್ ಛಾರ್ಜಿನಲ್ಲೇ ಅದನ್ನೂ ಅಡಕ ಮಾಡಿಕೊಂಡಿದೆ. ಅವರಿಗೆ ಪುನರ್ವಸತಿ ಮಾಡಿಕೊಡುವುದನ್ನು ಮಾಡುತ್ತಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಫಸ್ಟ್ ಫೇಸ್ ಮತ್ತು ಸೆಕೆಂಡ್ ಫೇಸ್ ಈ ಎರಡು ಕಾರ್ಯಕ್ರಮ ಎನು ಇವೆ, ಅದರಲ್ಲಿ ಎರಡನೇ ಹಂತದ ಯೋಜನೆಯಲ್ಲಿ ಕಣ್ವಾ ಜಲಾಶಯದ ಬ್ಯಾಲೆನ್ಸ್ ರಿಸರ್ವಾಯರ್ ಕಟ್ಟುವ ಯೋಜನೆ ಒಳಪಟ್ಟಿದೆಯೇ ?

ಶ್ರೀ ಹೆಚ್. ಎನ್. ನಂಜೇಗೌಡ.—ನೇ ಹಂತದಲ್ಲಿ ನಾಲೆ ತೆಗೆದುಕೊಂಡು ಹೋಗಿ ಫೀಡರ್ ಛಾನಲ್‌ಗೆ ಒದಗಿಸುವ ಯೋಜನೆ ಆಗುತ್ತಾ ಇರುವಾಗ ಮುಂಡೆ ಆ ಬಗ್ಗೆ ಆಲೋಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬೆಟ್ಟಸ್ವಾಮಿಗೌಡ.—ಮಂಚನಬೆಲೆ ಯೋಜನೆ ಕೈಗೊಂಡ ಮೇಲೆ ಮಾಗಡಿ ತಾಲ್ಲೂಕಿನ ಕೆಲವು ಜಮೀನು ಮುಳುಗಡೆಯಾಗುತ್ತದೆ. ಆದುದರಿಂದ ಆ ಮಾಗಡಿ ತಾಲ್ಲೂಕಿನ ಜನಗಳಿಗೆ ಲಿಫ್ಟ್ ಇರಿ ಗೇಷನ್ ಮುಂಖಾಂತರ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಎನ್. ನಂಜೇಗೌಡ.—ನೀರಿನ ಪ್ರಾಮ್ಯತೆ ನೋಡಿ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ್.—ಪೌಂಡೇಷನ್ ತೆಗೆಯುವ ಬಗ್ಗೆ ಫಾಲ್ಸ್ ಬಂತು ಎಂದೂ, "ಇಟ್ ಈಸ್ ಯೆಟ್ ಅಂಡರ್ ಇನ್‌ವೆಸ್ಟಿಗೇಷನ್" ಎಂದೂ ಹೇಳುತ್ತಿದ್ದರೂ ಈಗ ಟೆಕ್ನಿಕಲ್ ಅದು ಅನ್‌ಸೌಂಡ್ ಇದ್ದರೂ ಅದನ್ನು ಆಲ್ಲಿಯೇ ತೆಗೆಯಬೇಕಾಗುತ್ತದೆ ಅಲ್ಲವೇ ?

ಶ್ರೀ ಹೆಚ್. ಎನ್. ನಂಜೇಗೌಡ.—ಫೌಂಡೇಷನ್ ಮಾಡುವಾಗ 'ಕಟ್ ಆಫ್ ವಾಲ್' ಎಂದು ಮಾಡಿಕೊಳ್ಳುತ್ತಾರೆ. ಅದು ಮಾಡಿ ಮುಗಿದು ಹೋಗಿದೆ. ಫೌಂಡೇಷನ್ ಆಳಪಡಿಸಿದಾಗ ತಾಂತ್ರಿಕ ಪರಿಣತರು ಪರಿಶೀಲನೆ ಮಾಡಿ ಅಂದಾಜು ತಯಾರು ಮಾಡುತ್ತಾರೆ.

DISTRIBUTION OF HOUSE SITES IN MUDDEBIHAL TALUK

377. SRI M. M. SAJJAN (Muddebihal).—Will the Minister for Municipal Administration be pleased to state :—

(*a*) the extent of area of house sites available for distribution to the siteless people of Muddebihal taluk as on 25th February 1973 (Villagewise);

(*b*) the names of the villages in Muddebihal Taluka where land is proposed for acquisition for the purpose of distributing to the siteless people (as on 26th February 1973) ;

(*c*) the names of villages where sites are distributed to the site less people in Muddebihal taluk and extent of such area and the number of sites so formed ;

(*d*) the reasons why the Government sites or not yet distributed to the siteless though the sites are available in Muddebihal taluk ?

SRI B. BASAVALINGAPPA (Minister for Municipal Administration).—

(*a*) The following gaothana sites were available for distribution as on 25th February 1973 :